GATWU **Garment and Textile Workers Union**
ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್
*(Affiliated to New Trade Union Initiative – NTUI & IndustriAll Global union)*


## ನಿಮ್ಮ ಹಕ್ಕು ನಿಮಗೆ ಸಿಗಬೇಕೇ – ಇಂದೇ GATWU ಸದಸ್ಯರಾಗಿ

ಆತ್ಮೀಯ ಕಾರ್ಮಿಕ ಸಂಗಾತಿಗಳೇ,

ಗಾರ್ಮೆಂಟ್ಸ್ ಕಾರ್ಮಿಕರಾಗಿ ನಾವು ಅನುಭವಿಸುತ್ತಿರುವ ಶೋಷಣೆ, ಅನ್ಯಾಯ, ಬಡತನಗಳು ನಾವು ಒಗ್ಗಟ್ಟಾಗದೇ ಕೊನೆಯಾಗುವುದಿಲ್ಲ. ಇದಕ್ಕೆ ಒಂದು ಉತ್ತಮ ಉದಾಹರಣೆ ಶ್ರೀರಂಗಪಟ್ಟಣದ ECC-2 ಕಾರ್ಮಿಕರ ಹೋರಾಟ.

### ಶ್ರೀರಂಗಪಟ್ಟಣದ ECC-2 ನಲ್ಲಿ ಏನು ನಡೆದಿತ್ತು?

ಕೋವಿಡ್ ಲಾಕ್‌ಡೌನ್ ನಂತರ ಜೂನ್ 8 ರಂದು ECC-2 ಆಡಳಿತವರ್ಗದವರು ಕಂಪನಿಗೆ ಆರ್ಡರ್ ಇಲ್ಲ ಎಂದು ಕಾರಣ ಹೇಳಿ ಲೇಆಫ್ ಘೋಷಿಸಿ ಮುಚ್ಚಲು ಪ್ರಯತ್ನಿಸಿದ್ದರು. ಪರಿಣಾಮವಾಗಿ 1257 ಕಾರ್ಮಿಕರು ರಾತ್ರೋರಾತ್ರಿ ಕೆಲಸ ಕಳೆದುಕೊಂಡಿದ್ದರು.

ಅಂದಿನಿಂದಲೇ GATWU ನೇತೃತ್ವದಲ್ಲಿ 1200ಕ್ಕೂ ಹೆಚ್ಚು ಕಾರ್ಮಿಕರು 50 ದಿನಗಳ ಕಾಲ ಕಾರ್ಖಾನೆಯ ಆವರಣದಲ್ಲಿ ಕುಳಿತು ಕಂಪನಿಯ ಈ ಕ್ರಮದ ವಿರುದ್ಧ ಪ್ರತಿಭಟನೆ ನಡೆಸಿದ್ದರು. ನಂತರ ಆರ್ಥಿಕ ಪರಿಸ್ಥಿತಿಯ ಒತ್ತಡ ಹಾಗೂ ಆಡಳಿತವರ್ಗದ ಒತ್ತಡ ತಡೆಯಲಾರದೆ ಸ್ವಯಂ ರಾಜೀನಾಮೆ ಸಲ್ಲಿಸಬೇಕಾಯಿತು. ಈ ಸಂದರ್ಭದಲ್ಲಿ ಗೋಕಲ್‌ದಾಸ್ ಆಡಳಿತವರ್ಗದವರು ಕಾರ್ಮಿಕರಿಗೆ ಬರಬೇಕಾದ ಬಾಕಿ ಜೊತೆಗೆ ಪರಿಹಾರವನ್ನು ನೀಡಿದ್ದರು. ಆದರೂ ಸಹ **GATWU ಹಾಗೂ ಅದು ಅಫಿಲಿಯೇಟ್ ಆಗಿರುವ ರಾಷ್ಟ್ರೀಯ ಫೆಡರೇಶನ್ NTUI ಮತ್ತು ಅಂತರರಾಷ್ಟ್ರೀಯ ಫೆಡರೇಶನ್ IndustriAll Global union** ಗಳು ಈ **ಹೋರಾಟವನ್ನು** ಕೈಬಿಡದೆ ECC-2 ಕಾರ್ಮಿಕರಿಗೆ ನ್ಯಾಯ ಒದಗಿಸುವ ಸಲುವಾಗಿ ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಮತ್ತು H&M ವಿರುದ್ಧ ಅಂತರರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಹೋರಾಟವನ್ನು ಮುಂದುವರೆಸಿದೆವು.

ಸತತವಾಗಿ 8 ತಿಂಗಳ ಹೋರಾಟದ ಪರಿಣಾಮವಾಗಿ, 2021 ರ ಫೆಬ್ರವರಿ 1 ರಂದು **GATWU** ಮತ್ತು ಗೋಕಲ್‌ದಾಸ್ ಎಕ್ಸ್‌ಪೋರ್ಟ್ ನಡುವೆ ಈ ಕೆಳಗಿನಂತೆ ಒಪ್ಪಂದವಾಯಿತು. ಇದು ಕಾರ್ಮಿಕರ ಹೋರಾಟಕ್ಕೆ ಸಿಕ್ಕ ಜಯ.

1. ECC-2 ನಲ್ಲಿ ಕೆಲಸ ಮಾಡುತ್ತಿದ್ದ ಎಲ್ಲ ಕಾರ್ಮಿಕರಿಗೂ ತನ್ನ CCC1 ಅಥವಾ AA2 ಅಥವಾ ಕಾರ್ಮಿಕರು ಬಯಸುವ ಯಾವುದೇ ಯೂನಿಟ್‌ನಲ್ಲಿ ಕೆಲಸ ಕೊಡಬೇಕು.
2. ECC-2 ಕಂಪನಿಯಿಂದ ಎಲ್ಲ ಕಾರ್ಮಿಕರಿಗೂ ಸಾರಿಗೆ ವ್ಯವಸ್ಥೆ ಮಾಡಬೇಕು.
3. ECC-2 ಕಾರ್ಮಿಕರು ರಾಜೀನಾಮೆ ಸಲ್ಲಿಸಿದಾಗ ಪಡೆದ ಪರಿಹಾರದ ಹಣವನ್ನು ಹಿಂತಿರುಗಿಸಬೇಕಾಗಿಲ್ಲ ಮತ್ತು ಎಲ್ಲಾ ಕಾರ್ಮಿಕರಿಗೂ service continue (ಕೆಲವು ನಿಬಂಧನೆಗಳೊಂದಿಗೆ) ಮಾಡಬೇಕು.
4. CCC1 ಗೆ ವರ್ಗಾವಣೆಗೊಂಡ 21 ಕಾರ್ಮಿಕರಿಗೂ ಉಳಿದ ಕಾರ್ಮಿಕರಿಗೆ ನೀಡಿದ ಪರಿಹಾರದ ಮೊತ್ತ ಕೊಡಬೇಕು.

**ನೀವೆಲ್ಲರೂ ತಕ್ಷಣವೇ GATWU ವಿನ ಸದಸ್ಯರಾಗಬೇಕು ಏಕೆಂದರೆ, ಗಾರ್ಮೆಂಟ್ಸ್ ಕಾರ್ಮಿಕರ ಜೀವನವನ್ನು ಉತ್ತಮ ಪಡಿಸಲು ಹೋರಾಡುತ್ತಿರುವ GATWU ವಿನ ಜೊತೆಗೆ ನೀವಿರಬೇಕು.**

- ಗಾರ್ಮೆಂಟ್ಸ್ ಕಾರ್ಮಿಕರಿಗೆ ಈಗಿರುವ ಕನಿಷ್ಠ ವೇತನದಿಂದ ರೂ.12,200 ಕ್ಕೆ ಹೆಚ್ಚಿಸಲು ತನ್ನ ಹೋರಾಟವನ್ನು ಮುಂದುವರೆಸಿದೆ.
- ನೀವು ಕೆಲಸ ಮಾಡುತ್ತಿರುವ ಕಂಪನಿಯಲ್ಲಿ ನಿಮ್ಮ ಆರ್ಥಿಕ ಪರಿಸ್ಥಿತಿಯನ್ನು ದುರುಪಯೋಗ ಪಡಿಸಿಕೊಂಡು ನಡೆಸುತ್ತಿರುವ 10% ವರೆಗಿನ ಬಡ್ಡಿ ದಂಧೆಯನ್ನು ನಿಲ್ಲಿಸುವುದು. ಜೊತೆಗೆ ಕಷ್ಟ ಕಾಲದಲ್ಲಿ ಬೇಕಿರುವ ಹಣಕಾಸು ವ್ಯವಸ್ಥೆಗೆ ಅಧಿಕೃತ ಹಣಕಾಸು ಸಂಸ್ಥೆಗಳ ಜೊತೆ ಸಂಪರ್ಕಿಸುವುದು.
- ಕಾರ್ಖಾನೆಗೆ ಹೋಗಿ ಬರಲು ನೀವು ಖರ್ಚು ಮಾಡುತ್ತಿರುವ ಪ್ರಯಾಣದ ವೆಚ್ಚವನ್ನು ಕಡಿಮೆ ಮಾಡಲು ಪ್ರಯತ್ನಿಸುವುದು.
- 2020 ರ ಡಿ.ಎ ಯನ್ನು ಹಿಂಬಾಕಿಯ ಸಮೇತ ಕೊಡಿಸಲು ಕಾರ್ಖಾನೆಯ ಮೇಲೆ ಒತ್ತಡ ಮತ್ತು ಹೋರಾಟವನ್ನು ಮಾಡುವುದು.

ಬನ್ನಿ ಒಟ್ಟಾಗೋಣ, ಒಟ್ಟಾಗಿ ಹೋರಾಡೋಣ, ಒಟ್ಟಾಗಿ ಗೆಲ್ಲೋಣ


ನಂ. 17/1, 1ನೇ ಮಹಡಿ, ಬಾಲಾಜಿ ಕಲ್ಯಾಣ ಮಂಟಪ ಹತ್ತಿರ, ಹೊಸಗುಡ್ಡದಹಳ್ಳಿ, ಮೈಸೂರು ರಸ್ತೆ, ಬೆಂ–560026
ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: 9945027599, 9342989643, 7019775356


Scanned with OKEN Scanner